ದಿನಾಂಕ 08-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ - ವಾದಿಯರ ಪರ ಶ್ರೀ ಕೆ.ಎಸ್.ಬಿ., ವಕೀಲರಿಂದಃ**

ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ.

ನಾನು ನನ್ನ ವಾದ ಪತ್ರದ ಜೊತೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಪಿ-1 | ದಾವಾ ಬಿ ತಪಶೀಲು ಸರ್ವೆ ನಂಬ್ರ-279/2 ಪಿ2 ಇದರ ಪಹಣಿ ಪತ್ರಿಕೆ, |
| ನಿಪಿ-2 | ದಾವಾ ಬಿ ತಪಶೀಲು ಸರ್ವೆ ನಂಬ್ರ-279/5 ಬಿ2 ಇದರ ಪಹಣಿ ಪತ್ರಿಕೆ, |
| ನಿಪಿ-3 | ದಾವಾ ಬಿ ತಪಶೀಲು ಸರ್ವೆ ನಂಬ್ರ-279/7 ಎ 2 ಇದರ ಪಹಣಿ ಪತ್ರಿಕೆ, |
| ನಿಪಿ-4 | ಸರ್ವೆ ನಂಬ್ರ-128/46 ಇದರ ಪಹಣಿ ಪತ್ರಿಕೆ, |
| ನಿಪಿ-5 | ಅಸಲು ದಾವೆ ನಂಬ್ರ-172/1984 ರಲ್ಲಿ ಸಲ್ಲಿಸಲಾದ ಜಂಟಿ ಮೆಮೋದ ದೃಢೀಕೃತ ನಕಲು, |
| ನಿಪಿ-6 | ಸದರಿ ದಾವೆಯಲ್ಲಿನ ಅಂತಿಮ ಡಿಕ್ರಿಯ ದೃಢೀಕೃತ ನಕಲು. |

**ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ., ಉಡುಪಿ.